ಸಾಕ್ಷಿಯನ್ನು ದಿನಾಂಕಃ **15-09-2025** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ 3 ನೇ ಪ್ರತಿವಾದಿ ಪರ ಶ್ರೀ. ಎಂ ಎಂ ಜೆ., ವಕೀಲರಿಂದಃ**

ನಾನು ಈ ದಾವೆಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಹಾಜರುಪಡಿಸಿದ್ದೇನೆ, ಇನ್ನಾವುದೇ ದಾಖಲೆಗಳನ್ನು ಹಾಜರುಪಡಿಸುವುದು ಬಾಕಿ ಇರುವುದಿಲ್ಲ. ನಾನು ಎಲ್ಲರ ಪರವಾಗಿಯೂ ಅಂದರೆ ಸಹೋದರರ ಪರವಾಗಿ ಸಾಕ್ಷಿ ಜವಾಬು ಹೇಳುತ್ತಿದ್ದೇನೆ. ನಾನು ಕೆ ಎಸ್ ಆರ್ ಟಿ ಸಿ ಯಲ್ಲಿ ಚಾಲಕನಾಗಿ ತಾತ್ಕಾಲಿಕ ನೆಲೆಯಲ್ಲಿ ಕೆಲಸ ಮಾಡಿದ್ದೆನು. ನಾನು ಕುಮಟಾ ಡಿಪೋ ದಲ್ಲಿ ಕೆಲಸ ನಿರ್ವಹಿಸಿದ್ದೆನು. ನಾನು ಈಗ ನೌಕರಿಯಿಂದ ನಿವೃತಿಯಾಗಿದ್ದೇನೆ. ಕುಮಟಾದಲ್ಲಿ ಮಾತ್ರವಲ್ಲದೇ ಬಾದಾಮಿ ಡಿಪೋದಲ್ಲೂ ಕೆಲಸ ಮಾಡಿದ್ದೇನೆ. ಬಾದಾಮಿಯಲ್ಲಿ ಕೆಲಸ ಮಾಡುತ್ತಿರಬೇಕಾದರೆ ಮನೆಯು ಕಡ್ಲೆಯ ಹೆಬ್ಬಾನಕೇರಿ ಕೊಪ್ಪ ಇಲ್ಲಿತ್ತು. ಬಾದಾಮಿಯಲ್ಲಿ ಕೆಲಸಕ್ಕಿರಬೇಕಾದರೆ ನಾನು ವಾರಕೊಮ್ಮೆ ಮನೆಗೆ ಹೋಗಿ ಬರುತ್ತಿದ್ದೆ. ಕುಮಟಾದಲ್ಲಿ ಕೆಲಸ ಮಾಡುತ್ತಿರಬೇಕಾದರೆ ದಿನಾಲೂ ಮನೆಗೆ ಹೋಗಿ ಬರುತ್ತಿದ್ದೆ. ಸ.ನಂ.303/2 ಇದು 20 ಗುಂಟೆ ಕ್ಷೇತ್ರ. ಸ.ನಂ. 357 /2 ಇದು 6 ಗುಂಟೆ ಕ್ಷೇತ್ರ. ಸ.ನಂ. 328/2 ಇದು 18 ಗುಂಟೆ ಕ್ಷೇತ್ರ. ಸ.ನಂ. 461/2 ಇದು 5 ಗುಂಟೆ ಕ್ಷೇತ್ರ. ಸ.ನಂ. 197/2 ಇದು 24 ಗುಂಟೆ ಕ್ಷೇತ್ರ. ಇದು ಯಾವುದೇ ಕ್ಷೇತ್ರದ ಚತುರ್ಗಡಿಗಳನ್ನು ಹೇಳಲು ನನಗೆ ಸಾಧ್ಯವಿಲ್ಲ. ಸ.ನಂ. 195/2 ಇದು 20 ಗುಂಟೆ 8 ಆಣೆ ಕ್ಷೇತ್ರ. ಸ.ನಂ. 195/1 ಇದು 02-09-04 ಕ್ಷೇತ್ರ. ಸ.ನಂ. 195/1 ರ ಚತುರ್ಗಡಿ ಹೇಳಲು ನನಗೆ ಸಾಧ್ಯವಿಲ್ಲ. ಇದರ ಪಶ್ಚಿಮ ದಿಕ್ಕಿಗೆ ಫಾರೆಸ್ಟ ಸರ್ವೇ ನಂಬರ್ ಇದೆ, ಉತ್ತರ ದಿಕ್ಕಿಗೆ ಸರ್ವೇ ನಂಬರ್ ಹೇಳಲು ಸಾಧ್ಯವಿಲ್ಲ, ಶೆಟ್ಟರ ಜಾಗ ಇದೆ. ಸ.ನಂ. 195/2 ಇದರ ಉತ್ತರ ದಿಕ್ಕಿಗೆ ಫಾರೆಸ್ಟ ಲ್ಯಾಂಡ್ ಇದೆ, ದಕ್ಷಿಣ ದಿಕ್ಕಿಗೆ ಯಾವ ಸರ್ವೇ ನಂಬರ್ ಇದೆ ಎಂದು ಹೇಳಲು ಸಾಧ್ಯವಿಲ್ಲ, ಪೂರ್ವ ದಿಕ್ಕಿಗೆ ಗಣೇಶ ಹೆಗಡೆಯವರ ಆಸ್ತಿ ಇದೆ, ಪಶ್ಚಿಮ ದಿಕ್ಕಿಗೆ ಯಾರ ಆಸ್ತಿ ಇದೆ ಎಂದು ಹೇಳಲು ಸಾಧ್ಯವಿಲ್ಲ. ನಾನು ಈಗ ಹೇಳಿದ ಚತುರ್ಗಡಿಗಳನ್ನು ದಾವಾ ಸಲ್ಲಿಸುವ ಸಂದರ್ಭದಲ್ಲಿ ನಮೂದು ಮಾಡಿದ್ದೇನೆ. ಸ.ನಂ.195/1 ನಿಪಿ1 ಇದರಲ್ಲಿ ಗಂಗೆ ಗಣೇಶ ಹೆಗಡೆ, ಮಂಗಲ ಪ್ರಕಾಶ ಜೋಶಿ, ಗಣಪತಿ ಗಣೇಶ ಹೆಗಡೆ ಇವರೆಲ್ಲ ಯಾರು ಎಂದು ಸಾಕ್ಷಿಗೆ ಕೇಳಲಾಗಿ ಸಾಕ್ಷಿಯು ಇವರೆಲ್ಲರಿಗೂ ಈ ಆಸ್ತಿಯಲ್ಲಿ ಹಕ್ಕಿದೆ ಎಂದು ನುಡಿದಿರುತ್ತಾರೆ. ಸ.ನಂ.195/2 ಇದರಲ್ಲಿ ಮಾಸ್ತಿ ಗೌಳಿ ಗೌಡ, ಭಾಗೀರಥಿ ತಿಳಿ ಗೌಡ, ಕ್ಷೇಮಾ ವಿಷ್ಣು ಗೌಡ, ರೇಖಾ ವಿಷ್ಣು ಗೌಡ ಇವರಿಗೆ ದಾವಾಸ್ತಿಯಲ್ಲಿ ಹಕ್ಕಿದೆ ಎಂದರೆ ಸರಿ. ಸ.ನಂ. 195/1 ಹಾಗೂ 195/2 ಈ ಆಸ್ತಿಗಳು ಮೇಲೆ ಹೇಳಿದ ವ್ಯಕ್ತಿಗಳ ಕಬ್ಜಾ ಭೋಗವಟೆಯಲ್ಲಿ ಇವೆ ಎಂದರೆ ಸರಿ. ನನಗೆ ಹಾಗೂ ಪ್ರತಿವಾದಿಯರ ಕುಟುಂಬಕ್ಕೆ ಸಂಬಂಧ ಇದೆ ಎಂದು ತೋರಿಸಲು ಯಾವುದೇ ಕಾಗದ ಪತ್ರಗಳು ಇಲ್ಲ. ನಮ್ಮ ಕುಟುಂಬವೇ ಬೇರೆ, ಪ್ರತಿವಾದಿಯರ ಕುಟುಂಬವೇ ಬೇರೆ ಆಗಿರುತ್ತದೆ.

**(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

**-Sd-**

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾದಂ..**

**ಹೊನ್ನಾವರ.**